(6ನೇ ಪುಟದಿಂದ)

ಗಾಜಿನ ತೋಟ ಕಣ್ಣಿಗೆ ಬಿತ್ತು. ಪ್ರವೇಶ ಶುಲ್ಕ ಒಬ್ಬರಿಗೆ 20 ಡಾಲರ್. ಸ್ವಲ್ಪ ದುಬಾರಿಯೆನಿಸಿದರೂ ನೋಡೇ ಬಿಡೋಣವೆಂದು ಟಿಕೆಟ್ ಖರೀದಿಸಿ ಒಳಗಡೆ ಹೋದೆವು.

ಈ ಗಾಜಿನ ತೋಟದಲ್ಲಿ ಬೇರೆ ಬೇರೆ ಥೀಮಿನ ಒಟ್ಟು ಎಂಟು ಗ್ಯಾಲರಿಗಳಿವೆ. ಮೊದಲನೆಯದು ಸಾಗರದ ಬಗ್ಗೆ. ಬಣ್ಣ ಬಣ್ಣದ ಗಾಜಿನ ಕೊಳವೆಗಳ ಚಿತ್ತಾರಗಳು, ಗಾಜಿನ ಸಮುದ್ರದ ಜಲಚರಗಳು ಸೂರಿನ ತನಕ ಎತ್ತರದ ಸುಂದರ ಗಾಜಿನ ಕೊಳವೆಗಳ ನಡುವೆ ಅಡಗಿದ್ದವು. ಕಲಾಕೃತಿಗಳನ್ನು ಸಾದರ ಪಡಿಸಿದ ರೀತಿ, ಬೆಳಕಿನ ಸಂಯೋಜನೆ, ದಂಗು ಬಡಿಸುವಂತೆ ಇತ್ತು. ನಂತರದ ಗ್ಯಾಲರಿಗಳಲ್ಲಿ ಜಪಾನೀಯರ ಇಕೆಬಾನ ಕಲೆ, ವೆನಿಸ್‌ನ ದೋಣಿ ಕಲಾಕೃತಿಗಳು, ಪರ್ಷಿಯಾದ ಕಲೆ ಇವೆಲ್ಲವೂ ಗಾಜಿನಲ್ಲಿ ಅರಳಿದ್ದವು. ಇದನ್ನೆಲ್ಲಾ ದಾಟಿ ಬಂದರೆ ಒಂದು ಕೋಣೆಯ ತುಂಬಾ ನಾನಾ ವಿಧದ ಹಾಗೂ ವರ್ಣದ ಗಾಜಿನ ತೂಗು-ದೀಪಗಳು ಸೂರನ್ನು ಅಲಂಕರಿಸಿದ್ದವು. ಇನ್ನೊಂದು ಕೋಣೆಯಲ್ಲಿ ಗಾಜಿನ ಕಲಾಕೃತಿಗಳನ್ನು ತಯಾರಿಸುವ ಬಗ್ಗೆ ವೀಡಿಯೊ ತೋರಿಸುತ್ತಿದ್ದರು. ಇನ್ನೊಂದು ಗ್ಯಾಲರಿಯಲ್ಲಿ ನೆತ್ತಿಯ ಮೇಲೆ ನಾನಾ ವಿಧದ ಗಾಜಿನ ಹೂವುಗಳು ಅರಳಿದ್ದವು. ಎಲ್ಲವನ್ನೂ ಕಣ್ಣು ಹಾಗೂ ಕ್ಯಾಮೆರಾಗಳಲ್ಲಿ ತುಂಬಿಕೊಂಡು ಹೊರಗೆ ಬಂದರೆ, ಹಸಿರು ಸಸ್ಯ ತೋಟದ ಮಧ್ಯೆಯೂ ಗಾಜಿನ ಕಲೆಯು ಅರಳಿ ನಿಂತಿತ್ತು.

ಡೈಲ್ ಚಿಹುಲಿ ಎಂಬ ಕಲೆಗಾರನೇ ಈ ಗಾಜಿನ ತೋಟದ ರೂವಾರಿ. ಇವನು ಹುಟ್ಟಿದ್ದು 1941ರಲ್ಲಿ, ಸಿಯಾಟಲ್ ನಗರದ ಪಕ್ಕದಲ್ಲಿರುವ ತಕೋಮ ಎಂಬ ಪ್ರಾಂತ್ಯದಲ್ಲಿ. ವಾಶಿಂಗ್ಟನ್ ಯೂನಿವರ್ಸಿಟಿಯಲ್ಲಿ ಓದುತ್ತಿರುವಾಗಲೇ ಗಾಜಿನ ಕಲೆಯಲ್ಲಿ ಆಸಕ್ತಿ ಇದ್ದ ಈತ ಮುಂದೆ ಅದನ್ನೇ ವೃತ್ತಿಯಾಗಿ ಮಾಡಿ-ಕೊಂಡ. ಕೆಲವು ವರುಷಗಳ ಕಾಲ ರೋಹ್ಡ್ ಐಲಾನ್ದ ಸ್ಕೂಲ್ ಆಫ್ ಡಿಸೈನ್‌ನಲ್ಲಿ ಪ್ರಾಧ್ಯಾಪಕನಾಗಿಯೂ ಕೆಲಸ ಮಾಡಿದ. ಆನಂತರ ಫುಲ್‌ಬ್ರೈಟ್ ಸ್ಕಾಲರ್‌ಶಿಪ್ ಪಡೆದು ವೆನಿಸ್‌ನಲ್ಲಿ ಗಾಜಿನ ಕಲೆಯಲ್ಲಿ ಇನ್ನೂ ಹೆಚ್ಚಿನ ನೈಪುಣ್ಯತೆ ಪಡೆದು, ಸಿಯಾಟಲ್‌ಗೆ ಹಿಂದಿರುಗಿ ಅಲ್ಲಿ ಪಿಲ್ಚುಕ್ ಗಾಜಿನ ಕಲಾಶಾಲೆಯನ್ನು ಪ್ರಾರಂಭಿಸಿದ.

ಡೈಲ್ ಚಿಹುಲಿಯು ಗಾಜಿನ ಕಲೆಯಲ್ಲದೇ ಚಿತ್ರಕಲೆಯಲ್ಲಿಯೂ ಪರಿಣಿತಿ ಹೊಂದಿದ್ದಾನೆ. ಈತನ ಅದ್ಭುತ ಕಲಾಕೃತಿಗಳು ದೇಶ ವಿದೇಶಗಳಲ್ಲಿ ಪ್ರದರ್ಶನ-ಗೊಂಡಿವೆ. ಈತನ ಕಲೆಯನ್ನು ಮೆಚ್ಚಿ ವಿಶ್ವದಾದ್ಯಂತ ಅನೇಕ ಗೌರವ ಡಾಕ್ಟೊರೇಟ್‌ಗಳು, ಪ್ರಶಸ್ತಿಗಳು ಹಾಗೂ ಪದವಿಗಳು ಇವನನ್ನು ಅರಸಿ-ಕೊಂಡು ಬಂದಿವೆ. ಇವನ ಕಲಾಕೃತಿಗಳನ್ನು ಲಂಡನ್, ದುಬೈ ಮತ್ತು ಅನೇಕ ಜಾಗತಿಕ ಕಲಾಶಾಲೆಗಳಲ್ಲಿ ಪ್ರತಿಷ್ಠಾಪಿಸಲಾಗಿದೆ. ಲಂಡನ್‌ನಲ್ಲಿ ಒಮ್ಮೆ ಇವನು ಕಾರಿನಲ್ಲಿ ಪ್ರಯಾಣಿಸುತ್ತಿರುವಾಗ ಅಪಘಾತವೊಂದಕ್ಕೆ ಈಡಾಗಿ, ಗಾಜಿನ ಚೂರೊಂದು ಕಣ್ಣಿಗೆ ಸಿಡಿದು ಒಂದು ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡಿದ್ದು ಒಂದು ವಿಪರ್ಯಾಸವೇ ಸರಿ. ನಮಗಂತೂ ಸಿಯಾಟಲ್ ನಗರದ ಅನೇಕ ಆಕರ್ಷಣೆಗಳಲ್ಲಿ ಈ ಸುಂದರ ಗಾಜಿನ ತೋಟವು ಒಂದು ಮರೆಯಲಾಗದ ಅನುಭವ.


ಸಮುದ್ರದ ಆಡಿಯಲ್ಲಿ ಗಾಜಿನ ವಿನ್ಯಾಸ

ಸಸ್ಯಗಳು ಮತ್ತು ಗಾಜಿನ ಮರ


ವೆನಿಸ್‌ನ ಗಾಜಿನ ದೋಣಿ
